ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿ.ಸಿ ನಂಃ **762/2022**

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರುಃ

1. ಲಕ್ಷ್ಮಣ ತಂದೆ ಲೇಟ್ ಗೋವಿಂದಪ್ಪ, 32 ವರ್ಷ
2. ತಮ್ಮಣ್ಣ ತಂದೆ ರಾಮಣ್ಣ, 25 ವರ್ಷ
3. ಶ್ರೀಧರ ತಂದೆ ರಂಗಪ್ಪ, 25 ವರ್ಷ
4. ಉಮೇಶ ತಂದೆ ಹಟ್ಟಿತಿಮ್ಮಯ್ಯ, 28 ವರ್ಷ
5. ಜಯಚಂದ್ರ ತಂದೆ ಮರಿಯಣ್ಣ, 35 ವರ್ಷ
6. ತಿಮ್ಮಣ್ಣ ತಂದೆ ಮರಿಯಣ್ಣ, 30 ವರ್ಷ
7. ರಂಗಪ್ಪ ತಂದೆ ತಿಮ್ಮಣ್ಣ, 45 ವರ್ಷ
8. ಜಗದೀಶ ತಂದೆ ರಾಮಣ್ಣ, 28 ವರ್ಷ
9. ದೇವರಾಜ, 38 ವರ್ಷ
10. ಇಂದ್ರಮ್ಮ ಕೋಂ ರಾಮಣ್ಣ, 45 ವರ್ಷ
11. ಭಾಗ್ಯಮ್ಮ ಕೋಂ ದೇವರಾಜು, 30 ವರ್ಷ
12. ಲಕ್ಷ್ಮೀದೇವಿ ಕೋಂ ಲಕ್ಷ್ಮಣ, 27 ವರ್ಷ
13. ಮುರಳೀಧರ ತಂದೆ ಕೃಷ್ಣಪ್ಪ, 22 ವರ್ಷ
14. ಪ್ರಶಾಂತ್ ಯಾದವ್ ತಂದೆ ಕೃಷ್ಣಪ್ಪ, 25 ವರ್ಷ

ಎಲ್ಲರ ವಾಸಃ ಬೇಟೆಮಾರದಹಟ್ಟಿ ಗ್ರಾಮ,
ಹಿರಿಯೂರು ತಾಲ್ಲೂಕು.

## ದೋಷಾರೋಪಣೆ

ನಾನು ಶ್ರೀಮತಿ. ಸುಜಾತ ಸುವರ್ಣ.ಬಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ

ಗುರಿಪಡಿಸುವುದೇನೆಂದರೆ

ದಿನಾಂಕ 02.04.2022 ರಂದು ರಾತ್ರಿ 10.15 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಬೇಟೆಮರದ ಹಟ್ಟಿ ಗ್ರಾಮದ ಚಾಸಾ.2 ರವರು ಜಮೀನಿಂದ ಮನೆಗೆ ತಮ್ಮ ಬಾಬ್ತು ಮೋಟರ್ ಸೈಕಲ್ ನಲ್ಲಿ ಹೋಗುತ್ತಿರುವಾಗ್ಗೆ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 143 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಅಕ್ರಮ ಕೂಟ ಕಟ್ಟಿಕೂಂಡು ಬಂದು ದೊಂಬಿ ಎಬ್ಬಿಸಿ, ಆ ಮೂಲಕ ನೀವು ಭಾ ದಂ ಸಂ ಕಲಂ 147 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಅಕ್ರಮ ಕೂಟ ಕಟ್ಟಿಕೂಂಡು ಕೈಗಳಲ್ಲಿ ಕಲ್ಲು ಕೋಲುಗಳನ್ನು ಹಿಡಿದುಕೊಂಡು ಹೋಗಿ ದೊಂಬಿ ಎಬ್ಬಿಸಿ, ಆ ಮೂಲಕ ನೀವು ಭಾ ದಂ ಸಂ ಕಲಂ 148 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು 1 ಮತ್ತು 2 ನೇ ಆರೋಪಿತರು ರಸ್ತೆಯಲ್ಲಿ ಅಡ್ಡನಿಂತಿದ್ದವರಿಗೆ ಚಾಸಾ.2 ರವರು ಹೋಗಲು ದಾರಿ

ಬಿಡಲು ಕೇಳಿದ್ದಕ್ಕೆ ಅಲ್ಲಿಗೆ ಬಂದ 3 ನೇ ಆರೋಪಿ ರವರು ರಸ್ತೆಯೇನು ನಿಮ್ಮಪ್ಪನದೇನೋ ಎಂದು ಬೈದಾಡುತ್ತಿದ್ದು ಇದನ್ನು ಕೇಳಲು ಬಂದ ಚಾಸಾ.1 ಮತ್ತು 2 ರವರಿಗೆ 1 ರಿಂದ 3 ನೇ ಆರೋಪಿತರು ಸೂಳೆ ಮಕ್ಕಳಾ ಬೋಳಿ ಮಕ್ಕಳಾ ನಿಮ್ಮದು ಅತೀಯಾಯಿತು ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ ಮತ್ತು ಚಾಸಾ.1 ರಿಂದ 3 ರವರಿಗೆ 1 ರಿಂದ 14 ನೇ ಆರೋಪಿತರು ಸೂಳೆ ಮಕ್ಕಳಾ ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ ಶಾಂತಿ ಭಂಗವನ್ನುಂಟು ಮಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 504 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಐದನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ಚಾಸಾ.3 ರವರಿಗೆ 1 ನೇ ಆರೋಪಿ ಸ್ವಯಿಚ್ಚೆಯಿಂದ ರವರು ಬೈದಾಡಿ ಕೈಯಿಂದ ಕೆನ್ನೆಗೆ ಹೊಡೆದಿದ್ದು 2 ನೇ ಆರೋಪಿಯು ಚಾಸಾ.2 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದಿದ್ದು ಉಳಿದ ಆರೋಪಿತರು ಚಾಸಾ.1 ರಿಂದ 4 ರವರಿಗೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 323 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಆರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು 3 ನೇ ಆರೋಪಿಯು ಸ್ವಯಿಚ್ಚೆಯಿಂದ ಚಾಸ.1 ರವರ ತಲೆಗೆ ಬೆನ್ನಿಗೆ ಹೊಡೆದಿದ್ದು 1 ನೇ ಆರೋಪಿಯು ಚಾಸಾ.3 ರವರಿಗೆ ಕಲ್ಲಿನಿಂದ ತಲೆಗೆ ಹೊಡೆದಿದ್ದು, 4 ನೇ ಆರೋಪಿಯು ಚಾಸಾ.3 ರವರಿಗೆ ಕೋಲಿನಿಂದ ತಲೆಗೆ ಹೊಡೆದಿದ್ದು, 10 ನೇ

ಆರೋಪಿತರು ಚಾಸಾ.4 ರವರಿಗೆ ಕಲ್ಲಿನಿಂದ ಬೆನ್ನಿಗೆ ಹೊಡೆದು ನೋವುಂಟುಪಡಿಸಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 324 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 506 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

(ಈ ಮೇಲೆ ಹೇಳಿದ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತಿದ್ದು ಈ ಆರೋಪಗಳಿಗಾಗಿ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ .)

ದಿನಾಂಕಃ 19.08.2024
ಸ್ಥಳಃ ಹಿರಿಯೂರು

(ಸುಜಾತ ಸುವರ್ಣ. ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಹಿರಿಯೂರು